ಮಾಡ್ಕೊಡೇ.' ಶಿವ್ರಾಮ ಚೌಕಿ ಹೊಂಡಕ್ಕೆ ಕಾಲು ಇಳಿಬಿಟ್ಟು, ಪಾಣಿಪಂಚೆಯನ್ನೊಮ್ಮೆ ಸರಿಪಡಿಸಿಕೊಂಡು, ಕಂಬದ ಮರೆಯಲ್ಲಿದ್ದ ಕವಳದ ಹರಿವಾಣ ಎಳೆದುಕೊಂಡು ಎಲೆಯ ತೊಟ್ಟು ತೆಗೆದು ಸುಣ್ಣ ಬಳಿಯುತ್ತಾ ಸಾವಕಾಶವಾಗಿ ಕುಳಿತ.

'ಹುಡ್ಗಾ ಯೆಂತಾ ಮಾಡ್ತದಾನೋ? ನೀ ಬಿಡು, ಬೆಂಗ್ಳೂರು ಪೇಟೆ ಸೇರ್ಕಂಡ್ ಅಲ್ಲೇ ಉಳ್ದುಬಿಟ್ರೆ ಗಮ್ಮತ್ತಾಗ! ಊರ ಕಡೆ ಯೆಂತಾ ಪ್ರಯೋಜ್ನಾ ಇಲ್ಲಾ ಮರಾಯ. ಅಡಿಕೆ ಗೊನೆ ಟ್ರಾಕ್ಟರ್‌ನಲ್ಲಿ ಹಾಕ್ಕಂಡ್ ಸುಲಿಯೋರ ಮನೀಗೆ ಹೊರ್ಡುತಿದ್ದೆ. ನೀವ್ ಬರೋದ್ ಒಂಚೂರು ತಡಾಗಿದ್ರೂ ನಾ ಮನೀ ಬಿಟ್ಟಾಗಿರ್ತಿತ್ತು. ಈಗೆಲ್ಲಾ ಇದೇ ಕತೆ ಮರಾಯ. ಮೊದಲ್ಕಂಣಂಗೆ ಅಡ್ಕೆ ಕೊಯ್ಲಿಗೆಲ್ಲಾ ಜನ ಸಿಕ್ಕಲ್ಲ. ಸುಲ್ಯೋಕ್ ಜನಿಲ್ಲ, ಬೇಯ್ಸೋಕೂ ಜನಿಲ್ಲ ಆಗಿದೆ. ಸಾಕ್ ಮರಾಯ, ಈ ಹಳ್ಳಿಬದುಕು!' ಎಲೆ ಬಾಯಲ್ಲಿಟ್ಟುಕೊಳ್ಳುತ್ತಾ ಅಂದ.

ಆಡಲು ಬಂದ ಮಾತನ್ನು ಅಮ್ಮ ಶುರು ಮಾಡಬಹುದೆಂದು ಅವನು ಕಾದ. ಅವನು ಹೇಳಬಹುದೆಂದು ಅವಳು ಕಾದು, 'ಶಿವ್ರಾಮ, ಬಂದ ವಿಷ್ಯವೇ ಬೇರೆ.' ಎಂದು ಮೆಲ್ಲಗೆ ಶುರು ಮಾಡಿದಳು.

'ಚಿಕ್ಕಮ್ಮ ಯೆಂತಾ ಬೇಕಾದ್ರೂ ಕೇಳಿ. ಆಸ್ತೀಲಿ ಪಾಲೊಂದು ಕೇಳ್ಬ್ಯಾಡಿ. ಸುಬ್ರಾಯನ ಜೊತೆ ಇತ್ಯರ್ಥ ಮಾಡ್ಕಂಡ್ ಮಾಡ್ಕಂಡ್ ತಲಿ ಕೂದ್ಲೆಲ್ಲಾ ಉದುರಿ ನೋಡಿ, ಹೆಂಗೆ ಬೋಡಾಯ್ತು!'

ಶಿವ್ರಾಮ ಅದೆಷ್ಟು ಸಟ್ಟನೆ ಏನೋ ಊಹಿಸಿಕೊಂಡವನಂತೆ ಹೇಳಿದನೆಂದರೆ ಒಂದು ಕ್ಷಣ ವೈದೇಹಿ ಮಾತು ನಿಲ್ಲಿಸಿ ಶ್ರೀಪಾದನ ಮುಖ ನೋಡಿದಳು. ಇಂತವನ್ನೆಲ್ಲಾ ಎಂದೂ ಮಾತನಾಡದ ಶ್ರೀಪಾದನಿಗೂ ಹೇಗೆ ಶುರು ಮಾಡಬೇಕೆಂದೇ ತಿಳಿಯದೇ ಮೈಯೆಲ್ಲಾ ಹಿಡಿಯಾಗಿ ಕುಳಿತವ ನಿಧಾನಕ್ಕೆ ಬಾಯಿ ತೆರೆದು, 'ಶಿವ್ರಾಮಣ್ಣಯ್ಯ, ಯೆಂತಾಂದ್ರೆ ಅಮ್ಮ ತುಂಬಾ ದಿನದಿಂದಾ ಹೇಳ್ತಿದ್ರೂ ನಂಗೇ ಇಲ್ಗೆ ಬರ್ಲಿಕ್ಕೆ ಪುರ್ಸೊತ್ತು ಆಗುತ್ತಿರ್ಲಿಲ್ಲ. ಅಮ್ಮ ಅಂತಿದ್ಳು.. ಅಪ್ಪಯ್ಯಂದೂ ಪಾಲಿಂದು ಅಮ್ಮಮ್ಮ ಕೊಟ್ಟ ಹಳೇ ಬಂಗಾರ, ದಾಗಿನು, ಬೆಳ್ಳಿ...'

ಆಡಲೋ ಬೇಡವೋ ಎಂದು ಅನುಮಾನಿಸುತ್ತಾ ಮಾತನಾಡುತ್ತಿದ್ದ ಅವನಿನ್ನೂ ಮಾತು ಮುಗಿಸಿದ್ದನೋ ಇಲ್ಲವೋ! ಅಡುಗೆಮನೇಲಿದ್ದ ಮಂಗಳಾ ಬಿರುಗಾಳಿಯಂತೆ ಧಾವಿಸಿ ಬಂದು,

'ನಾ ಅಂದಾಜು ಮಾಡ್ದೇ ಸರಿ ಹಂಗಾರೆ. ಎಂದೂ ಇಲ್ಲದವ್ರು ಯೆಂತಕಪ್ಪಾ ಬಂದ್ರೂ ಅಂದ್ಕಂಡೆ. ಅಮ್ಮಮ್ಮ ಯೆಂತಾ ನಿಮ್ಗೆ ಕೊಟ್ರೋ ಯಾರ್ಗೆ ಗೊತ್ತು? ಅವ್ರು ಹ್ವಾಗಿಯೇ ಯಾಪಾಟಿ ವರ್ಷಾತಲಾ ಸಣ್ಣತ್ತೆ. ಈಗೆಂತಾ ಮಾವಯ್ಯರೂ ಇಲ್ಲ, ಅತ್ತೆಯೂ ಇಲ್ಲ. ಅವ್ರು ಯೆಂತೂ ನಮ್ಗೆ ಹೇಳ್ಳೇಯಿಲ್ಲ. ಅಲಾ ಶ್ರೀಪಾದ, ನಿನ್ ದೊಡ್ಡಪ್ಪಯ್ಯಂಗೆ ಅಷ್ಟು ಹುಷಾರಿರ್ಲಾರ್, ಒಂದ್ ಸರ್ತಿನಾದ್ರೂ ಬಂದ್ಯನಾ ಕಾಣ್ಲಿಕ್ಕೆ? ನಿನ್ನ ದೊಡ್ಡಮ್ಮ ಮಲ್ಗಿದ್ದಲ್ಲೇ ಹೇಲು ಉಚ್ಚೆ ಮಾಡ್ಕಂತ್ತಿದ್ರಲ್ಲಾ? ಯೆಂತಾ ನಿನ್ನಮ್ಮ ಬಂದ್ ಅಕ್ಕಯ್ಯ ಹೆಂಗಾದರೇಂತಾ ಬಂದ್ ಬಾಚಿದ್ರೇನಾ? ನಮ್ಗೆ ದಿನ ಬೆಳ್ಗಾದ್ರೇ ಸುಬ್ಬುಭಾವಯ್ಯರ ಕರ್ಕರೆಯೇ ಸಾಕಾಗಿದೆ! ನೀ ಬ್ಯಾರೇ ಬಂದ್ಯನಾ ಪಾಲು ಕೇಳ್ಕಂಡು?'

'ಅಲ್ಲೇ ಮಂಗ್ಳಾ, ಪಾಲೆಂತೇ ಕೇಳಿದ್ನೇ? ಪಾಲು ಕೇಳೂಕೆ ಯೆಂತಿತ್ತು ಆಸ್ತೀಂತಾ ನಂಗಾರೂ ಗೊತ್ತಿತ್ತೇನೇ? ಇನ್ ಅಪ್ಪೀ ಕೇಳುತ್ತಾ ಹೇಳ್? ಅತ್ತೆ ಸಾಯೋಕೆ ಮುಂಚೆ ತಮ್ಮ ಬಂಗಾರನ್ನೆಲ್ಲಾ ಸಮಾ ಪಾಲು ಮಾಡಿ ಇವ್ರತ್ರ ಕೊಟ್ಟಿದ್ರಂತಲಾ. ಇವ್ರು ಜ್ವಾಪಾನವಾಗಿರ್ಲಿಯೆಂತಾ ಇಲ್ಲೇ ಇಟ್ಟಿದ್ರಂತಲೇ? ನಮ್ದು ನಮ್ಗೆ ಕೊಡೀಂತಾ ಕೇಳಿದ್ದು ಕಣೇ!'

'ಅಮ್ಮಮ್ಮ, ದೊಡ್ಡಜ್ಜಯ್ಯ ಇದ್ದಾಗಲೇ ಯಾಕೆ ಬರ್ಲಿಲ್ಲ ಮತೆ? ಅತ್ತೆಗೆ ತಲಿ ಸರೀಯಿದ್ದು, ಮಾವಯ್ಯ ಬದ್ಕಿದ್ದಾಗುಲೂ ಬರ್ಲಿಲ್ಲ. ಈಗೆ ಕೇಳಿದ್ರೆ ಯೆಂತಾ ಸಣ್ಣತ್ತೆ? ನಾ ಇವ್ರಿಗೆ ಹೇಳುತ್ನಿ, ತಿಜೋರಿ ತೆಕ್ಕಡ್ತಾರೆ. ನೀವೇ ಅಲ್ಲೆಂತುಂಟು ನೋಡಿ ಆಯ್ತಾ?'